For more job news visit : www.kpscvaani.com

ಸ್ಥಾಪನೆ 27–09–1971 ನೊಂದಣಿ ಸಂಖ್ಯೆ: ಎಸ್.ಆರ್.ಎಸ್. 1977/71–72

# ಪದವೀಧರರ ಸಹಕಾರ ಸಂಘ ನಿ., ಕುವೆಂಪು ಮಾರ್ಗ, ಶಿವಮೊಗ್ಗ

ಕ್ರ.ಸಂ./ನೇಮಕಾತಿ/ಪ್ರಕಟಣೆ/ಜಿ.ಸಿ.ಎಸ್–1/2021–22 ದಿನಾಂಕ:26–04–2021

## ನೇಮಕಾತಿಗಾಗಿ ಪ್ರಕಟಣೆ

ನಮ್ಮ ಸಂಘದಲ್ಲಿ ಖಾಲಿ ಇರುವ ಕೆಳಗೆ ನಮೂದಿಸಿರುವ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಅರ್ಜಿಯ ಮೇಲ್ಭಾಗದಲ್ಲಿ ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ಫೋಟೋ ಅಂಟಿಸಿ ಎಲ್ಲಾ ದಾಖಲೆಗಳೊಂದಿಗೆ ಲಕೋಟೆಯನ್ನು ಮೇಲ್ಕಂಡ ವಿಳಾಸಕ್ಕೆ ದಿನಾಂಕ:27–05–2021ರಂದು ಸಂಜೆ 7–00 ಘಂಟೆಯೊಳಗೆ ತಲುಪುವಂತೆ ಸಲ್ಲಿಸತಕ್ಕದ್ದು.

| ಕ್ರ.ಸಂ | ಹುದ್ದೆ ವಿವರ | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 01 | ದ್ವಿತೀಯ ದರ್ಜೆ ಸಹಾಯಕರು (ವೇತನ ಶ್ರೇಣಿ: ರೂ. 21,400/– ರಿಂದ 42,000/– ಅನ್ವಯಿಸುವ ಇತರೆ ಭತ್ಯೆಗಳು) | 4 | ಹುದ್ದೆಯ ಆಕಾಂಕ್ಷಿಗಳು ಅಂಗೀಕೃತ ವಿಶ್ವವಿದ್ಯಾನಿಲಯ ದಿಂದ ಪಡೆದ ಪದವಿ ಕನಿಷ್ಠ ವಿದ್ಯಾರ್ಹತೆಯಾಗಿದ್ದು, ಈ ಪದವಿಯಲ್ಲಿ ಕನಿಷ್ಠ 55% ಅಂಕ ಪಡೆದಿರಬೇಕು ಮತ್ತು ಕಂಪ್ಯೂಟರ್ ಜ್ಞಾನ (ಕನ್ನಡ ಮತ್ತು ಇಂಗ್ಲೀಷ್) ಕಡ್ಡಾಯ ಬಿ.ಕಾಂ/ಬಿ.ಬಿ.ಎಂ/ಎಂ.ಕಾಂ/ಎಂ.ಬಿ.ಎ/ ಎಲ್.ಎಲ್.ಬಿ.,ಮತ್ತು ಸಹಕಾರ ವಿಷಯದಲ್ಲಿ ಪದವಿ ಅಧ್ಯಯನ ಮಾಡಿದವರಿಗೆ ಮತ್ತು ಹೆಚ್ಚಿನ ವಿದ್ಯಾರ್ಹತೆ ಹಾಗೂ ಅನುಭವವುಳ್ಳವರಿಗೆ ಆದ್ಯತೆ ನೀಡಲಾಗುವುದು. |
| 02 | 4ನೇ ದರ್ಜೆ ನೌಕರರು (ವೇತನ ಶ್ರೇಣಿ: ರೂ. 17,000/– ರಿಂದ 28,950/– ಅನ್ವಯಿಸುವ ಇತರೆ ಭತ್ಯೆಗಳು) | 2 | ಎಸ್.ಎಸ್.ಎಲ್.ಸಿಯಲ್ಲಿ ಕನಿಷ್ಠ 40% ಅಂಕ ಪಡೆದಿರಬೇಕು. ಕನ್ನಡ ಭಾಷೆಯನ್ನು ಸುಲಭವಾಗಿ ಮಾತನಾಡಲು/ ಓದಲು/ ಬರೆಯಲು ಬರಬೇಕು. |

### ನಿಬಂಧನೆಗಳು:

1. **ವಯೋಮಿತಿ:** ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳು ತುಂಬಿರಬೇಕು. ಗರಿಷ್ಠ ವಯಸ್ಸು ಸಾಮಾನ್ಯ ವರ್ಗದವರಿಗೆ 35 ವರ್ಷಗಳು, ಹಿಂದುಳಿದ ವರ್ಗದವರಿಗೆ 38 ವರ್ಷಗಳು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ 40 ವರ್ಷಗಳು. ಸಕ್ಷಮ ಪ್ರಾಧಿಕಾರದಿಂದ ಇತ್ತೀಚೆಗೆ ನೀಡಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಅಭ್ಯರ್ಥಿಗಳು ಪಡೆದಿರುವ ಪ್ರಮಾಣಪತ್ರದ ಪ್ರತಿಯನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿರಬೇಕು.
2. **ಅರ್ಜಿ ಶುಲ್ಕ:** ದ್ವಿತೀಯ ದರ್ಜೆ ಸಹಾಯಕ ಹುದ್ದೆಯ ಅಭ್ಯರ್ಥಿಗಳಿಗೆ ರೂ.2000/– ಹಾಗೂ 4ನೇದರ್ಜೆ ಸಹಾಯಕ ಹುದ್ದೆಗೆ ರೂ.1000/– ರಷ್ಟು ಶುಲ್ಕವನ್ನು ನಗದಾಗಿ ನೀಡುವ ಮೂಲಕ ಸಂಘದ ಕಚೇರಿಯ ವೇಳೆಯಲ್ಲಿ ಬಂದು ನಿಗದಿತ ಅರ್ಜಿಯನ್ನು ಪಡೆಯತಕ್ಕದ್ದು. ಪೂರ್ಣವಾಗಿ ಭರ್ತಿ ಮಾಡಿದ ಹಾಗೂ ಅಗತ್ಯದ ದಾಖಲಾತಿಗಳೊಂದಿಗೆ ಅರ್ಜಿಗಳನ್ನು ನೇರವಾಗಿ ಅಥವಾ ಅಂಚೆಯ ಮೂಲಕ 27–05–2021ರ ಸಂಜೆ 7–00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಅಪೂರ್ಣವಾದ ಹಾಗೂ ನಿಗದಿತ ದಿನಾಂಕದ ನಂತರದಲ್ಲಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ಅಭ್ಯರ್ಥಿಯ ಆಯ್ಕೆಯನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ನಡೆಸಲಾಗುವುದು. ಲಿಖಿತ ಪರೀಕ್ಷೆಯು 200 ಅಂಕಗಳಿಗೆ ಇದ್ದು, ಈ ಪರೀಕ್ಷೆಯು ಕನ್ನಡ ಭಾಷೆ 50 ಅಂಕಗಳು, ಸಾಮಾನ್ಯ ಇಂಗ್ಲೀಷ್ 25 ಅಂಕಗಳು, ಸಾಮಾನ್ಯ ಜ್ಞಾನ 25 ಅಂಕಗಳು, ಭಾರತೀಯ ಸಂವಿಧಾನ 25 ಅಂಕಗಳು, ಸಹಕಾರ ವಿಷಯ 50 ಅಂಕಗಳು ಹಾಗೂ ಈ ಹುದ್ದೆಯ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ 25 ಅಂಕಗಳು= ಒಟ್ಟು 200 ಅಂಕಗಳಿಗೆ ವಸ್ತುನಿಷ್ಠ ಬಹು ಆಯ್ಕೆ ಮಾದರಿಯ (Objective type Multiple choice) ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಈ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳನ್ನು ಶೇ.50 ಎಂದು ಪರಿಗಣಿಸಿ ಹಾಗೂ ಕನಿಷ್ಠ ವಿದ್ಯಾರ್ಹತೆಯಾದ ಪದವಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ.50ರನ್ನಾಗಿ ಪರಿಗಣಿಸಿ ಸಿದ್ಧಪಡಿಸಲಾದ ಮೆರಿಟ್ ಪಟ್ಟಿಯ ಅನುಸಾರ 1:10 ಪ್ರತಿಶತದಂತೆ ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ ಪರೀಕ್ಷೆ (ಪದವಿ+ಅರ್ಹತಾ ಪರೀಕ್ಷೆ)ಗಳ ಅಂಕಗಳನ್ನು ಒಟ್ಟು ಶೇ.85 ಹಾಗೂ ಸಂದರ್ಶನದಿಂದ ಗಳಿಸಿದ ಅಂಕಗಳನ್ನು ಶೇ.15ರನ್ನಾಗಿ ಪರಿಗಣಿಸಿ ಮೆರಿಟ್ ಆಧಾರದಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.
4. 4ನೇ ದರ್ಜೆ ಸಹಾಯಕ ಹುದ್ದೆಗೆ ಅಭ್ಯರ್ಥಿಯ ಆಯ್ಕೆಯನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ನಡೆಸಲಾಗುವುದು. ಲಿಖಿತ ಪರೀಕ್ಷೆಯು 50 ಅಂಕಗಳಿಗೆ ಇರುತ್ತದೆ.
5. ಶುಲ್ಕ ಪಾವತಿಸದ, ಸಹಿ ಮಾಡಿರದ, ಸೂಕ್ತ ದಾಖಲಾತಿಗಳು ಇಲ್ಲದ ಹಾಗೂ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಅಭ್ಯರ್ಥಿಗಳು ನಿಗದಿಪಡಿಸಿದ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಎಲ್ಲಾ ಸೆಮಿಸ್ಟರ್/ವರ್ಷಗಳ ಅಥವಾ ವಾರ್ಷಿಕ ಪರೀಕ್ಷೆಯ ಅಂಕ ಪಟ್ಟಿಗಳ ಜೊತೆ, ಜನ್ಮ ದಿನಾಂಕ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಯ ಸಹಿ ಮತ್ತು ಸೀಲಿನೊಂದಿಗೆ ದೃಢೀಕರಿಸಿ ಅರ್ಜಿಯೊಂದಿಗೆ ಸಲ್ಲಿಸಬೇಕು ಮತ್ತು ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.
7. ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
8. ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಲಕೋಟೆಯ ಮೇಲೆ ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸಬೇಕು ಹಾಗೂ ಅಭ್ಯರ್ಥಿಯ ಸರಿಯಾದ ಅಂಚೆಯ ವಿಳಾಸವನ್ನು ಬರೆದಿರಬೇಕು.
9. ಪದವೀಧರ ಸಹಕಾರ ಸಂಘವು ರಾಜ್ಯದ ಅತ್ಯುತ್ತಮ ಸಹಕಾರ ಸಂಘಗಳಲ್ಲಿ ಒಂದಾಗಿದ್ದು, ಅಭ್ಯರ್ಥಿಗಳ ಆಯ್ಕೆಯು ಕೇವಲ ಅರ್ಹತೆಯ ಆಧಾರದ ಮೇಲೆ ನಡೆಯುತ್ತದೆ. ಯಾವುದೇ ರೀತಿಯ ಶಿಫಾರಸ್ಸು ಬೀರುವ ಅಭ್ಯರ್ಥಿಗಳನ್ನು ಆಯ್ಕೆಯ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು.
10. ಈ ಜಾಹೀರಾತನ್ನು ಬದಲಾಯಿಸುವ, ನೇಮಕಾತಿಯನ್ನು ಮುಂದೂಡುವ ಅಥವಾ ಅಗತ್ಯಬಿದ್ದಲ್ಲಿ ರದ್ದುಪಡಿಸುವ ಪೂರ್ಣ ಅಧಿಕಾರ ಆಡಳಿತ ಮಂಡಳಿಯದ್ದಾಗಿರುತ್ತದೆ. ಹಾಗೂ ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಸಂಘದ ನೇಮಕಾತಿ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ.
11. ಹೆಚ್ಚಿನ ವಿವರಗಳಿಗೆ ಸಂಘದ ಕಚೇರಿಯಲ್ಲಿ ಕಾರ್ಯದರ್ಶಿಯವರನ್ನು ಸಂಪರ್ಕಿಸಿ.

**ದೂರವಾಣಿ: 08182–224500, 08182–226887, E-Mail- Graduate1971@gmail.com.**

ಸಹಿ/– (ಶ್ರೀ ಟಿ.ವಿ. ಗೋಪಾಲಕೃಷ್ಣ)
**ಕಾರ್ಯದರ್ಶಿ**

ಸಹಿ/– (ಶ್ರೀ ಎಸ್.ಪಿ. ದಿನೇಶ್)
**ಅಧ್ಯಕ್ಷರು**